ಸೂಪರ್ ಜನಮನ
ಸೋಮವಾರ ಅಕ್ಟೋಬರ್ 6, 2014

ಕಣಕ

ಮನೆವಾರ್ತೆ: ಮನೆ ಬಾಳಿಕೆಗೆ ಭದ್ರ ಬುನಾದಿ

ಮನೆಕಟ್ಟುವವಸ್ತುಗಳಲ್ಲಿಹಾಗೂತಂತ್ರಗಳಲ್ಲಿ ಹಲವು ಹೊಸ ಆವಿಷ್ಕಾರಗಳಾಗುತ್ತಿವೆ. ಇವನ್ನು ಬಳಸಿಕೊಳ್ಳುವ ಜಾಣತನ ತೋರಿದಲ್ಲಿ ಕಡಿಮೆ ಸಮಯ ಹಾಗೂ ವೆಚ್ಚದಲ್ಲಿ ನಮ್ಮ ಕನಸಿನ ಮನೆಗಳನ್ನು ಕಟ್ಟಿಕೊಳ್ಳಬಹುದು. ಅಂತಹ ತಂತ್ರಗಳು ಹಾಗೂ ವಸ್ತುಗಳನ್ನು ಪರಿಚಯಿಸುವ ಮಾಲಿಕೆಯ ಮೂರನೆಯ ಲೇಖನ ಇದು...

— ಸಂಪಾದಕ



ಅಡಿಪಾಯಕ್ಕೆ ಆಧಾರ ಸ್ತಂಭ

ಕಳೆದ ವಾರ ಡೆಕ್ ಸ್ಲಾಬ್ ವಿಧಾನದ ಬಗ್ಗೆ ತಿಳಿಸಿದ್ದೆವು. ಡೆಕ್‌ಸ್ಲಾಬ್‌ಗಳು ತೂಕದ ಮಂಚವಿದ್ದ ಹಾಗೆ. ಇವುಗಳ ಭಾರವನ್ನು ತಡೆಯಲು ಆಧಾರ ಅವಶ್ಯಕ. ಆಧಾರಕ್ಕೆ ಆರ್‌ಸಿಸಿ (ಕಾಂಕ್ರೀಟು) ಕಂಭಗಳನ್ನು ಅಥವಾ ಸಿಮೆಂಟು–ಕಾಂಕ್ರೀಟು ಬ್ಲಾಕ್ ಇಟ್ಟಿಗೆಗಳಿಂದ ಕಟ್ಟಿದ ಸ್ತಂಭಗಳನ್ನು ಹಾಕಬಹುದು. ಈ ವಿಧಾನದಲ್ಲಿ ಪ್ಲಿಂತ್ ತೊಲೆಯನ್ನು ಮೊದಲು ಕಟ್ಟಿ, ಸ್ತಂಭವನ್ನು ತಾರಸಿಯ ಮಟ್ಟಕ್ಕೆ ಏರಿಸುತ್ತಾರೆ.

ಮೇಲಿನ ಎಲ್ಲ ವಿಧಾನಗಳನ್ನೂ ನುರಿತ ಇಂಜಿನಿಯರುಗಳ ಮೇಲ್ವಿಚಾರಣೆಯಲ್ಲಿ ಕೈಗೊಳ್ಳುವುದು ಒಳಿತು. ಇವು ಅಸಾಂಪ್ರದಾಯಿಕ ವಿಧಾನಗಳಾದರೂ, ಮೂಲತಃ ಸಾಂಪ್ರದಾಯಿಕ ವಿಧಾನಗಳನ್ನೆ ಅಲ್ಪ, ಸ್ವಲ್ಪ ಬದಲಾವಣೆಗಳೊಂದಿಗೆ ಬಳಸಲಾಗುತ್ತದೆ. ಇಂದಿನ ದಿನಗಳಲ್ಲಿ ಕಡಿಮೆ ವೆಚ್ಚದಲ್ಲಿ, ಉತ್ತಮ ಗುಣಮಟ್ಟದ ರಚನೆಯನ್ನು ನಿರ್ಮಿಸಲು ಈ ಅಸಾಂಪ್ರದಾಯಿಕ ವಿಧಾನಗಳು ನೆರವಾಗುತ್ತವೆ.

ಸಾಂಪ್ರದಾಯಿಕವಾಗಿ ಹತ್ತು ಚದರದ ಮನೆ ಕಟ್ಟಲು ಸಾಕಷ್ಟು ವೆಚ್ಚವಾಗುತ್ತದೆ. ಕನಿಷ್ಠ ಆರೇಳು ತಿಂಗಳ ಕಾಲವೂ ವ್ಯಯವಾಗುತ್ತದೆ. ಆದರೆ ಇದೇ ಹತ್ತು ಚದರದ ಮನೆಯನ್ನು 'ಕಾಂಪೊಸಿಟ್ ಮೇಸನ್ರಿ' ತಂತ್ರಗಳನ್ನು ಅಳವಡಿಸಿಕೊಂಡಲ್ಲಿ ಎರಡು ತಿಂಗಳಲ್ಲೇ ಪೂರ್ಣಗೊಳಿಸಬಹುದು. ಇದು ಹೇಗೆ ನೋಡೋಣ.

ಕಾಂಪೊಸಿಟ್ ಮೇಸನ್ರಿ ಎಂದರೆ ಹಲವು ತಂತ್ರಗಳನ್ನು ಒಟ್ಟಾಗಿಸಿದ ವಿಧಾನವಷ್ಟೆ. ಇದರಲ್ಲಿ ಪ್ರಮುಖವಾದದ್ದು ಪ್ರಿಕಾಸ್ಟ್ ರಚನೆಗಳು. ಅರ್ಥಾತ್, ಮೊದಲೇ ಸಿದ್ಧಪಡಿಸಿದ ಕಟ್ಟಡದ ಅಂಗಗಳು. ಕಟ್ಟಡದ ಅಂಗಗಳಾದ ಕಿಟಕಿ, ಬಾಗಿಲ ಚೌಕಟ್ಟುಗಳು, ತೊಲೆ, ತಾರಸಿ ಮುಂತಾದುವನ್ನು ಕಾರ್ಖಾನೆಯಲ್ಲಿ ಮೊದಲೇ ಸಿದ್ಧಗೊಳಿಸಿಕೊಂಡು, ನಿವೇಶನದಲ್ಲಿ ಅವನ್ನು ಜೋಡಿಸುವುದು ಈ ತಂತ್ರದ ಹೂರಣ. ಬಹುಮಹಡಿ ಕಟ್ಟಡಗಳನ್ನು ಕಟ್ಟಲು ಈ ವಿಧಾನದ ಬಳಕೆ ಹೆಚ್ಚು. ಕಾಲ ಹಾಗೂ ಕಟ್ಟೋಣಗಳಲ್ಲಿ ಸಮರೂಪತೆಯನ್ನು ಕಾಯ್ದುಕೊಳ್ಳಲು ಇದು ನೆರವಾಗುವುದು. ಇವನ್ನು ನಮ್ಮ ಅವಶ್ಯಕತೆಗೆ ತಕ್ಕಂತೆ ಕಟ್ಟಿಕೊಳ್ಳುವ ಪುಟ್ಟ ಮನೆಗಳ ನಿರ್ಮಾಣದಲ್ಲೂ ಬಳಸಿಕೊಳ್ಳಬಹುದು.

ಈ ವಿಧಾನವನ್ನು ಬಳಸಿದರೆ ನಿವೇಶನದಲ್ಲಿ ಕೈಗೊಳ್ಳಬೇಕಾದ ಗಾರೆ ಕಲಸುವುದು, ಇಟ್ಟಿಗೆ ಇಡುವುದು ಮುಂತಾದವುಗಳ ಅವಶ್ಯಕತೆ ಇರುವುದಿಲ್ಲ. ಕಾರ್ಖಾನೆಯಲ್ಲಿಯೇ ಇವೆಲ್ಲವೂ ಮುಗಿದಿರುತ್ತದೆ. ಜೊತೆಗೆ ಗುಣಮಟ್ಟದ ನಿರ್ವಹಣೆಯೂ ಸುಲಭ. ಪ್ರಿಕಾಸ್ಟ್ ಕಟ್ಟೋಣದಲ್ಲಿ ಕಟ್ಟಡದ ವಿನ್ಯಾಸ ಬಲು ಮುಖ್ಯ ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ ನಾವು ಮನೆ ಕಟ್ಟುವಾಗ, ಮನಸ್ಸನ್ನೂ ಬದಲಿಸಿ ಹಲವು ಬಾರಿ ವಿನ್ಯಾಸವನ್ನು ತಿದ್ದುವುದುಂಟು. ಇಂತಹ ಬದಲಾವಣೆಗಳನ್ನು ಪ್ರಿಕಾಸ್ಟ್ ತಂತ್ರ ಬಳಸುವಾಗ ಮಾಡುವುದು ಕಠಿಣ ಹಾಗೂ ದುಬಾರಿಯಾಗಬಹುದು. ಆದ್ದರಿಂದ ಕಟ್ಟಡದ ವಿನ್ಯಾಸವನ್ನು ಪೂರ್ತಿಯಾಗಿ ತೀರ್ಮಾನಿಸಿ ಅನಂತರ ನಿರ್ಮಾಣಕ್ಕೆ ಬಳಸುವುದು ಉಚಿತ.

ಪ್ಲಿಂತ್ ಹಾಕುವಾಗ ಕಾಂಕ್ರೀಟಿನ ಯು–ಬ್ಲಾಕ್‌ಗಳನ್ನು ಉಪಯೋಗಿಸಬಹುದು. ಇದರಿಂದ ಸೆಂಟರಿಂಗ್ ಬಳಕೆ, ಕಾಂಕ್ರೀಟಿನ ಪ್ರಮಾಣ ಹಾಗೂ ಸಮಯದಲ್ಲಿ ಉಳಿತಾಯವಾಗುತ್ತದೆ. ಹಾಗೆಯೇ ಗಾರೆಯ ಕಂಭಗಳನ್ನು ಕಟ್ಟುವುದರ ಬದಲಿಗೆ ಪೊಳ್ಳು ಕಾಂಕ್ರೀಟು ಬ್ಲಾಕ್ (hollow concrete block) ಗಳನ್ನು ಬಳಸಬಹುದು. ಇವಕ್ಕೆ ಕಾಲಮ್ ಬಾಕ್ಸ್ ಸೆಂಟರಿಂಗ್ ಅವಶ್ಯಕತೆ ಇರುವುದಿಲ್ಲ.

ಇವು ಅಸಾಂಪ್ರದಾಯಿಕ ವಿಧಾನಗಳ ಉದಾಹರಣೆಗಳಷ್ಟೆ. ಕಟ್ಟಡಗಳ ಅಂಗಗಳನ್ನು ರಚಿಸುವ ವಿಧಾನವಷ್ಟೆ ಬದಲಾಗುತ್ತದೆಯೇ ವಿನಃ ಕಟ್ಟಡದ ನೋಟ ಬದಲಾಗುವುದಿಲ್ಲ. ಅಸಾಂಪ್ರದಾಯಿಕ ಕಟ್ಟಡದ ಉದಾಹರಣೆ ಹೆಬ್ಬಾಳು, ರಿಂಗ್‌ರೋಡ್ ಸಮೀಪವಿರುವ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಕಟ್ಟಡ (ವಿ–ಲೀಡ್). ನೋಡಲು ಇತರೆ ಕಟ್ಟಡಗಳಂತೆಯೇ ಇದ್ದರೂ ಇದರಲ್ಲಿ ಬಳಕೆಯಾಗಿರುವ ಅಂಗಗಳೆಲ್ಲವೂ ಕಾರ್ಖಾನೆಗಳಲ್ಲಿ ತಯಾರಾದಂಥವು.

ಅಸಾಂಪ್ರದಾಯಿಕ ವಿಧಾನಗಳಲ್ಲಿ ಕಟ್ಟುವಾಗ ಪೂರ್ವಯೋಜನೆ ಬಲು ಮುಖ್ಯ. ಸರಿಯಾದ ರೀತಿಯಲ್ಲಿ ವಿನ್ಯಾಸವನ್ನು ಹಾಗೂ ಕಟ್ಟಡವನ್ನು ಯೋಜಿಸದಿದ್ದರೆ, ಎಲ್ಲ ಕೆಲಸಗಳನ್ನೂ ಹೊಂದಿಸಿಕೊಳ್ಳದಿದ್ದರೆ ಗುಣಮಟ್ಟವೂ ಕುಸಿಯಬಹುದು. ವೆಚ್ಚವೂ ಹೆಚ್ಚಬಹುದು. ಈ ಅಪಾಯಗಳು ಸಾಂಪ್ರದಾಯಿಕ ವಿಧಾನದಲ್ಲಿಯೂ ಇವೆ ಎನ್ನಿ.


ಇದರ ಸುಲಲಿತ ಬಳಕೆ ಸದ್ಯಕ್ಕೆ ಅಡ್ಡಿಯಾಗಿರುವುದು ಕಟ್ಟಡಗಳ ಬಿಡಿ ಭಾಗಗಳನ್ನು "ಸಮರೂಪ"ತೆ. ಅಥವಾ ಸ್ಟಾಂಡರ್ಡೈಸೇಶನ್. ಸದ್ಯಕ್ಕೆ ಕಟ್ಟಡದ ವಿವಿಧ ಬಿಡಿಭಾಗಗಳು ಆಯಾಯ ತಯಾರಕರ ವಿನ್ಯಾಸವನ್ನು ಅವಲಂಬಿಸಿವೆ. ಇವುಗಳಲ್ಲಿ ಸಮರೂಪತೆ ಅರ್ಥಾತ್ ಪದಾರ್ಥಗಳ ಬಳಕೆ, ಪ್ರಮಾಣ, ಉದ್ದಗಲಗಳ ಅಳತೆಯಲ್ಲಿ ಸಮರೂಪತೆ ಇದ್ದರೆ ಬೃಹತ್ ಪ್ರಮಾಣದ ತಯಾರಿಕೆ ಸುಲಭ. ಬಳಕೆಯೂ ಹೆಚ್ಚುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಹೊಸತನ್ನು ಬಳಸುವ ಮನಸ್ಸೂ ಬೇಕು ಎನ್ನಿ.

— ಚಂದ್ರಶೇಖರ್ ಭಾರದ್ವಾಜ್, ಬಿ. ಎಸ್.
ವಿನ್ಯಾಸ್ ಕನ್‌ಸ್ಟ್ರಕ್ಷನ್ಸ್, ವಿವಿ ಮೊಹಲ್ಲ,
ಮೈಸೂರು

ವಿಜ್ಞಾನದ ವಿನೋದಮಯ ಪ್ರಶಸ್ತಿಗಳು

ಧಾರಾಕಾರವಾಗಿ ಸುರಿಯುವ ರಕ್ತವನ್ನು ಹೆಪ್ಪುಗಟ್ಟಿಸುವುದು ಸಾಹಸವಂತೆ. ಅದಕ್ಕೆ ಅಮೆರಿಕೆ ಹಾಗೂ ಭಾರತದ ವೈದ್ಯರ ಸಲಹೆ: ಹಂದಿಮಾಂಸದ ತುಣುಕುಗಳನ್ನು ಮೂಗಿನೊಳಗೆ ತುರುಕುವುದು. ಪ್ರಶಸ್ತಿಯ ಒಂದು ಪಾಲು ಭಾರತದ ಸೋನಲ್ ಸುರ್‍ಯಾ ಎನ್ನುವ ವೈದ್ಯೆಗೆ ದೊರಕಿದೆ.

ನೋಬೆಲ್ ಪಾರಿತೋಷಕಗಳು ಅಭೂತಪೂರ್ವ, ಮಾನವನ ಏಳಿಗೆಗೆ, ಅರಿವಿಗೆ ಉಪಯುಕ್ತವೆನ್ನಿಸಿದ ಸಂಶೋಧನೆಗಳಿಗೆ ದೊರಕುವ ಪ್ರಶಸ್ತಿಗಳು. ಆರ್ಥಿಕ ಹಾಗೂ ಸಾಹಿತ್ಯಕ್ಕೂ ನೋಬೆಲ್ ಪಾರಿತೋಷಕಗಳಿವೆ. ಇವನ್ನೂ ಇಗ್ನೋಬಲ್ ಮರೆತಿಲ್ಲ. ಕಲಾ ವಿಭಾಗದಲ್ಲಿ ಈ ವರ್ಷದ ಇಗ್ನೋಬಲ್ ಪ್ರಶಸ್ತಿ "ಕಲಾಕೃತಿಗಳಿಗೂ ನೋವಿಗೂ" ಇರುವ ಸಂಬಂಧವನ್ನು ಸಾರುತ್ತದಂತೆ. ಚಿತ್ರಗಳ ಸೌಂದರ್ಯ ನೋವಿನ ಸೀಮೆಯನ್ನು ಕದಲಿಸುತ್ತದೆ ಎಂದು ಇಟಲಿಯ ಮೂವರು ತಿಳಿಸಿದ್ದಾರೆ. ಅತ್ಯಂತ ಕೆಟ್ಟ ಕಲಾಕೃತಿಯನ್ನು ನೋಡುವಾಗ ಎಷ್ಟು ನೋವಾಗುತ್ತದೆ ಎನ್ನುವುದನ್ನು ಇವರು ಅಳೆದು ಈ ಪ್ರಬಂಧವನ್ನು ಪ್ರಕಟಿಸಿದ್ದಾರೆ. ಆಹಾ. ಕನ್ನಡ ಚಲನಚಿತ್ರಗಳನ್ನು ಮೊದಲ ದಿನವೇ ನೋಡಲು ದುಂಬಾಲು ಬೀಳುವ ವೀಕ್ಷಕರಿಗೆ ಚಿತ್ರ ನೋಡಿದ ಅನಂತರ ಆಗುವ ನೋವನ್ನು ಯಾರಾದರೂ ಅಳೆದರೆ ಇನ್ನೊಂದು ಪ್ರಶಸ್ತಿ ಖಂಡಿತ.



ಆರ್ಥಿಕತೆಯ ಸುಧಾರಣೆಗಾಗಿ ಇಟಲಿಯ ಸರ್ಕಾರಕ್ಕೆ ಉಪಯುಕ್ತ ಸಲಹೆ ನೀಡಿದ್ದಕ್ಕಾಗಿ ಅಲ್ಲಿನ ರಾಷ್ಟ್ರೀಯ ಸಂಖ್ಯಾಶಾಸ್ತ್ರ ಅಧ್ಯಯನ ಸಂಸ್ಥೆಗೆ ಇಗ್ನೋಬಲ್ ಪ್ರಶಸ್ತಿ ದೊರೆತಿದೆ. ದೇಶದ ವರಮಾನವನ್ನು ಹೆಚ್ಚಿಸಲು ಈ ಸಂಸ್ಥೆ ವೇಶ್ಯಾವೃತ್ತಿ, ಕಾನೂನುಬಾಹಿರ ಮದ್ಯಪದಾರ್ಥಗಳ ಮಾರಾಟ, ಕಳ್ಳಸಾಗಾಣಿಕೆ ಮತ್ತು ಇನ್ನಿತರ ಕಾನೂನುಬಾಹಿರ ವ್ಯವಹಾರಗಳ ಮೇಲೆ ತೆರಿಗೆ ಹೇರುವ ಮೂಲಕ ದೇಶದ ವರಮಾನವನ್ನು ಹೆಚ್ಚಿಸಬಹುದು ಎಂದು ಸಲಹೆ ಮಾಡಿದೆಯಂತೆ. ಹಾಂ. ನಮ್ಮಲ್ಲಿ ಗಣಿಗಾರಿಕೆ, ಸರ್ಕಾರಿ ಉದ್ಯೋಗ, ಪೆಟ್ರೋಲು ಬಂಕುಗಳನ್ನು ಇದಕ್ಕೆ ಸೇರಿಸಿಕೊಳ್ಳಬಹುದು, ಅಲ್ಲವೇ?

ಇಗ್ನೋಬಲ್ ಪ್ರಶಸ್ತಿಗಳು ವಿಡಂಬನೆ ಮಾಡುತ್ತವೇನೋ ನಿಜ. ತಮ್ಮ ಸಂಶೋಧನೆಯ ನಿರರ್ಥಕತೆಯನ್ನು ಸಾರುವ ಈ ಪ್ರಶಸ್ತಿಗಳನ್ನು ಹಸನ್ಮುಖರಾಗಿಯೇ ಸ್ವೀಕರಿಸುವ ವಿಜ್ಞಾನಿಗಳಿದ್ದಾರೆ. ಈ ಮೇಲಿನ ಸಂಶೋಧನೆಗಳನ್ನು ನಡೆಸಿದ ಮಹನೀಯರುಗಳಲ್ಲಿ ಹಲವರು ಕಳೆದ ವಾರ ಅಮೆರಿಕೆಯಲ್ಲಿ ಹಾಜರಿದ್ದು, ಸ್ವತಃ ಈ ಪ್ರಶಸ್ತಿಗಳನ್ನು ಸ್ವೀಕರಿಸಿದರೆಂದು ಜರ್ನಲ್ ಆಫ್ ಇರ್‍ರೆಪ್ರೊಡ್ಯೂಸಿಬಲ್ ರಿಸಲ್ಟ್ಸ್ ತಿಳಿಸಿದೆ. ಅತೀವ ತರ್ಕವೂ ವಿತರ್ಕವೆನ್ನಿಸುವುದಕ್ಕೆ ಈ ಸಂಶೋಧನೆಗಳೇ ಪುರಾವೆ.

ಕೊಳ್ಳೇಗಾಲ ಶರ್ಮ

ಕೊಳ್ಳಿ ಅಚ್ಚಿದ ಕತೆ!

ಹೈಕ್ಳ ಪಾಠ

ಇದೇನ್ರುಲ, ಇದು. ಬಿಸಿ, ಬಿಸಿ ಮಾತು ಇದ್ದಂಗೆ ಅದೆ ಅಂದ್ಕಂಡ್ರಾ? ಅಂಗೇನಿಲ್ಲ ಬುಡಿ. ಬರೇ ಕತೆ ಮಾತು ಅಸ್ಟೇಯಾ. ತೆಪ್ಪಾಗಿ ಯೋಳ್ಲಿಲ್ಲ ಕಣ್ರಪೋ. ಕತೆ ಮಾತು ಆಡ್ತಿವ್ನೇ ವಿನಾ ಮಾತು ಕತೆ ಅಲ್ಲ. ಅರ್ತ ಆಗ್ನಿಲ್ಲ ಅಂದ್ರಾ? ಒಸಿ ತಾಳಿ. ಎಲ್ಲಾ ಅರ್ತ ಆಗಾ ಅಂಗೇ ಯೋಳ್ತೀನಿ.

ಮಾತು ಮನೆ ಕೆಡಸ್ತು, ತೂತು ಒಲೆ ಕೆಡಸ್ತು ಅಂತ ಕೇಳೀವಿ. ಯಾರಾರಾ ಏನಾದ್ರಾ ಎಡವಟ್ಟು ಮಾತಾಡ್ದಾಗೆಲ್ಲ ಈ ಮಾತು ನೆಪ್ಪಿಗೆ ಬತ್ತದೆ. ಆದ್ರೆ ಒಂದು ಮಾತ್ನ ಮಾತ್ರ ಮರೀಬಾರ್‍ದು. ಮನ್ಸರ್‍ನ ಬುಟ್ರೆ ಪ್ರಾಣಿಗೋಳು ಮಾತಾಡ್ತಾವಾ ಯೋಳಿ? ಕತೆ ಮಾತೂ ಅಂಗೇಯಾ? ಮಾತು ಬಾರದವ ಕತೆ ಯೋಳಕ್ಕೆ ಆದೀತಾ? ಮನ್ಸನ್ನ ಬುಟ್ರೆ ಇನ್ನ್ಯಾರ್‍ಗೆ ಕತೆ, ಅರಿಕತೆ, ಪಾಟ ಎಲ್ಲ ಯೋಳಕ್ಕೆ ಆಯ್ತದೆ ಅಲ್ಲವ್ರಾ?

ಅಂದ್ರೂನೂ ಒಸಿ ಜನಕ್ಕೆ ಸಮಾದಾನಾನೇ ಇಲ್ಲ ಅನ್ನಿ. ಈ ಮನ್ಸರಗೆ ಯಾಕೆ ಕತೆ ಚಿಂತೆ? ಯಾವಾಗ ಕತೆ ಯೋಳೋದು ಕಲ್ತ ಅಂತೆಲ್ಲ ತಲೆ ಕೆಡಸ್ಕಂತಾನೇ ಅವ್ರೆ. ಮನ್ನೆ ಇಂಗೇ ಅಮೆರಿಕದ ಇಗ್ನಾನಿಗಳು ತಲೆ ಕೆಡಸ್ಕಂಡು ಈ ಬೂಮಿ ಮ್ಯಾಗೆ ಕತೆ ಅನ್ನಾದು ಯಾವಾಗ ಉಟ್ಟಿಬರ್ಲ್ಡು ಅಂತ ಉಡಕವ್ರಂತೆ.

ಕತೇಗೂ, ಅರಟೇಗೂ ಯತ್ವಾಸ ಬಾಳ ಇಲ್ಲ ಅನ್ನಿ. ಅಂದ್ರೂನೂ ಕತೇಲಿ ಕಲ್ಪನೆ ಜಾಸ್ತಿ ಇರ್ತದೆ. ಅರಟೇಲಿ ಬರೇ ಊಟ, ತಿಂಡಿ, ಮನೆ ಇಸ್ಯ ಇರ್ತದೆ ಅಂತ ಇಗ್ನಾನಿಗೋಳು ಯೋಳ್ತಾರೆ. ಮನ್ಸಂಗೆ ಮಾತು ಅನ್ನಾದು ಬಂದ ಕೂಡಲೆ ಅರಟೆ ಆರಂಬ ಆಗಿರ ಬ್ಯಾಕು. ಆದ್ರೆ ಕತೆ ಅನ್ನಾದು ಆಮ್ಯಾಕೆ ಕಲತಿರಬ್ಯಾಕು ಅನ್ನಾದು ಇವ್ರ ಯೋಚನೆ.


ಅಂಗಂತ ಇವ್ರು ಸುಮ್ನೆ ಇರ್‍ನಿಲ್ಲ ಅನ್ನಿ. ಆಪ್ರಿಕಾದ ಕಾಡೊಳ್ಗೆ ಇನ್ನಾ ಕೆಲವ್ರು ಕಾಡ ಜನದ ಅಂಗೇಯೇ ವಾಸ ಮಾಡ್ತಾ ಅವ್ರೆ. ಅವ್ರಲ್ಲೂ ಕತೆ ಯೋಳವ್ರು ಅವ್ರೆ. ಅದ್ಕೆ ಈ ಇಗ್ನಾನಿಗಳು ಆ ಜನಗೋಳ ಜತೇನೇ ಇದ್ಕಂಡು ಅವ್ರು ಯಾವಾಗ ಅರಟೆ ಒಡೀತಾರೆ. ಏನೇನು ಮಾತಾಡ್ಕಂತಾರೆ? ಎಸ್ಟೆಸ್ಟು ಕತೆ ಯೋಳ್ತಾರೆ ಅಂತೆಲ್ಲಾ ಲೆಕ್ಕ ಆಕವ್ರೆ.

ಈ ಕಾಡ್ಜನ ಕಂಡ್ರೆ ಒಟ್ಟೆ ಉರೀತದೆ. ಯಾಕಂದ್ರೆ ಇವ್ರು ಪ್ಯಾಟೆ ಮಂದಿ ಅಂಗೆ ಯಾವಾಗ್ಲೂ ಕುದ್ರೆ ಕಟ್ಕಂಡು ಓಡಾಕಿಲ್ಲ. ಒಟ್ಟೆ ತಣ್ಣಗಾಗಾಕೆ ಒಸಿ ಬ್ಯಾಟೆ ಆಡ್ತಾರೆ, ಆಮ್ಯಾಕೆ ಆರಾಮಾಗಿರ್ತಾರೆ. ಬೆಳಗಾನಾ ಬ್ಯಾಟೆ, ಊಟ ಮಾಡ್ಕಂಡು, ಚಂಜೆ ಆಗ್ತಿದ್ದಂಗೆ ಆರಾಮ ಮಾಡ್ತವ್ರಂತೆ. ಇವ್ರು ಯೇನಿದ್ರೂ ರಾತ್ರಿ ಒತ್ತೇ ಜಾಸ್ತಿ ಕತೆ ಯೋಳಾದು ಅಂತ ಈ ಇಗ್ನಾನಿಗಳು ಲೆಕ್ಕ ಬರದವ್ರೆ. ಬೆಳಕು ಇರಾವಾಗ ಇವ್ರು ಮಾತಾಡಾದೆಲ್ಲ ಊರ ಕತೆ. ಅಂದ್ರೆ, ಊಟ, ತಿಂಡಿ, ಬ್ಯಾಟೆ, ಎಂಗಸ್ರ ಇಚಾರ.

ರಾತ್ರಿ ಆಗ್ತಿದ್ದಂಗೆ ಎಲ್ಲಾನಾ ಒಸಿ ಬೆಂಕಿ ಕಾಸ್ಕಂಡು ಕುತ್ಕಂತಾರಲ್ಲ, ಆಗ ನೋಡಿ ಬತ್ತದಂತೆ ಕತೆ, ಆಡು, ನಗು ಎಲ್ಲಾವೇ. ಅಂದ ಮ್ಯಾಕೆ ಈ ಬೆಂಕಿ ಕಾಸ್ಕಳಾಕೂ ಕತೇಗೂ ಏನಾರ ಸಂಬಂದ ಇರಲೇ ಬ್ಯಾಕು ಅಲ್ಲವ್ರಾ? ಅಂಗೆ ನೋಡದ್ರೆ ಬೆಂಕಿ ಅನ್ನಾದು ಮನ್ಸ ಮಾಡಿದ್ದೆನಲ್ಲ. ಅದು ಈ ಪ್ರಪಂಚದಲ್ಲಿ ಮೊದ್ಲೇ ಇದ್ದಿದ್ದು. ಮನ್ಸ ಏನಿದ್ರೂ ಅದನ್ನ ಇಡ್ಕಂಡು, ಬಳಸಾಕೆ ಸುರು ಮಾಡಿರಬ್ಯಾಕು. ಅಂದ್ರೆ ಬ್ಯಾಕಾದಾಗ ಕೊಳ್ಳಿ ಅಚ್ಚಾದು, ಕೊಳ್ಳಿ ಆರಸಾದು ಕಲ್ತಕೊಂಡ ಮ್ಯಾಕೆ ಈ ಕತೆಗೋಳು ಆರಂಬ ಆಗಿರಬ್ಯಾಕು ಅಂತ ಈ ಇಗ್ನಾನಿಗಳ ಯೋಚನೆ. ಅದೆಂಗ್ಲಾ ಅನಬ್ಯಾಡಿ. ಬ್ಯಾಕು ಬ್ಯಾಕಿದ್ದಾಗ ಬೆಂಕಿ ಅಚ್ಚಳಾಕೆ ಗೊತ್ತಾದ ಮ್ಯಾಕೆ ರಾತ್ರಿ ಕತ್ಲಾದ ಮ್ಯಾಕೂ ಬೆಳಕು ಮಾಡ್ಕಳಾದ ಎಂಗೆ ಅಂತ ಗೊತ್ತಾಯ್ತು ಅಂತ ಅಲ್ಲವ್ರಾ? ಕತ್ಲಾದ ಮ್ಯಾಕೆ ಕೊಳ್ಳಿ ಅಚ್ಕಂಡು ಕೂತ್ಕಂಡ ಅಂದ್ರೆ ಒಸಿ ಜಾಸ್ತಿ ವ್ಯಾಳೆ ಸಿಕ್ಕಂಗಾಯ್ತು. ಇರಾ ಕೆಲ್ಸ ಎಲ್ಲಾ ಮುಗ್ಸಿದ ಮ್ಯಾಕೆ ಕತೆ ಯೋಳೋದು ಬುಟ್ಟು ಮಾಡಾಕೆ ಇನ್ನೇನು ಉಳೀತೈತಿ ಯೋಳಿ? ಅದ್ಕೆ ಕೊಳ್ಳಿ ಅಚ್ಚಾದು ಕಲ್ತಕಂಡ ಮ್ಯಾಕೇ ಮನ್ಸ ಕತೆಗಾರ ಆದ ಅಂತಾರೆ ಈ ಇಗ್ನಾನಿಗಳು. ಕೊಳ್ಳಿ ಅಚ್ಚಾಕೆ ನಾವು ಕಲ್ತಕಂಡದ್ದು ಈಗಲ್ಲ ಎಲ್ಡು ಲಕ್ಸ ವರ್ಸಗಳ ಹಿಂದೆ ಅಂತೆ. ಅಂದ ಮ್ಯಾಕೆ ಈ ಕತೆ ಅನ್ನಾ ಇಸ್ಯ ಎಲ್ಡರಿಂದ ನಾಕು ಲಕ್ಸ ವರ್ಸಗೋಳಸ್ಟು ಅಳೇ ಇಸ್ಯ ಅಂತೆ. ಇದೇ ಕಣ್ರುಲಾ ಕತೆ ಮಾತು.


— ಹಳ್ಳಿ ಮೇಷ್ಟ್ರು

ಭೂವಿಜ್ಞಾನಿಗಳ ಆಪ್ತ ಆಪ್



ಜಿಯಾಲಜಿ–ಮಿನರಲ್ ಐಡಿ **(Geology-Mineral ID).** ಭೂವಿಜ್ಞಾನಿಗಳಿಗೆ ಆಪ್ತವಾಗುವಂತಹ ಆಪ್. ಭೂವಿಜ್ಞಾನಿಗಳು ಕಾಡು, ಮೇಡುಗಳನ್ನು ಅಲೆದು ಸಂಗ್ರಹಿಸುವ ಕಲ್ಲು, ಮಣ್ಣುಗಳ ವರ್ಗೀಕರಣ ಸುಲಭವಾದುದಲ್ಲ. ಪ್ರತಿಯೊಂದು ಕಲ್ಲಿಗೂ ಅದರದ್ದೇ ಆದ ವಿಶೇಷ ಗುಣವಿದೆ. ಅದರಲ್ಲಿರುವ ಖನಿಜಾಂಶಗಳು, ಹರಳುಗಳ ರಚನೆ ಹಾಗೂ ಬಣ್ಣವನ್ನು ಆಧರಿಸಿ ಶಿಲೆಗಳನ್ನು ವರ್ಗೀಕರಿಸಲಾಗುತ್ತದೆ. ಕೈಯಲ್ಲಿರುವ ಕಲ್ಲು ಯಾವ ವರ್ಗದ್ದು ಎಂದು ತಿಳಿಯಲು ಇನ್ನು ಪ್ರಯೋಗಾಲಯಕ್ಕೋ, ಸಂಗ್ರಹಾಲಯಕ್ಕೋ ಹೋಗುವ ಬದಲಿಗೆ ಈ ಆಪ್ ಬಳಸಬಹುದು. ಶಿಲೆ, ಖನಿಜಗಳ ವರ್ಗೀಕರಣಕ್ಕೆ ಬಳಸುವ ಗುಣಗಳನ್ನು ತೋರಿಸಿ ಶಿಲೆ ಯಾವ ಬಗೆಯದ್ದು ಎಂದು ಊಹಿಸಲು ಇದು ನೆರವಾಗುತ್ತದೆ.


ಚಿತ್ರ–ವಿಶೇಷ



?

ಇದೊಂದು ಕೀಟ ಅಲ್ಲವೇ? ಅಲ್ಲ. ಇದರ ಬಗ್ಗೆ ವಿವರಗಳನ್ನು ಮುಂದಿನ ವಾರ ಇದೇ ಜಾಗದಲ್ಲಿ ಓದಿ.


ಕಳೆದ ವಾರ (22.9.2014) ಕಣಕದಲ್ಲಿ ಪ್ರಕಟವಾಗಿದ್ದ ಚಿತ್ರ–ವಿಶೇಷದ ಉತ್ತರ.



ನಾಸಾ ಉಪಗ್ರಹದ ಮೂಲಕ ತೆಗೆದ ಅರಬ್ಬೀಸಮುದ್ರದ ಚಿತ್ರ ಇದು. ನೀರು ನೀಲಿಯಾಗಿರದೆ ಹಸಿರಾಗಿರುವುದಕ್ಕೆ ಕಾರಣ ಅದರಲ್ಲಿ ಪಸರಿಸುತ್ತಿರುವ ಒಂದು ಸಮುದ್ರ ಜೀವಿ. ನಾಕ್ಟಿಲ್ಯೂಕಾ ಸಿಂಟಿಲನ್ಸ್ ಎನ್ನುವ ಇದು ಸಮುದ್ರದ ಮೇಲ್ಮೈನಲ್ಲಿ ಈಜುವ ಸೂಕ್ಷ್ಮಜೀವಿ. ಯಾವುದೇ ರೋಗಕಾರಕವಲ್ಲದಿದ್ದರೂ, ಇದರ ಬೆಳವಣಿಗೆ ಮೀನುಗಾರಿಕೆಗೆ ನುಂಗಲಾರದ ತುತ್ತಾಗಲಿದೆ ಎನ್ನುತ್ತಾರೆ ವಿಜ್ಞಾನಿಗಳು. ಏಕೆಂದರೆ ಮೀನುಗಳಿಗೆ ಆಹಾರವಾಗುವ ಡಯಾಟಂನಂತಹ ಹಲವಾರು ಬಗೆಯ ಸೂಕ್ಷ್ಮಜೀವಿಗಳನ್ನು ಇದು ತಿನ್ನುವುದಲ್ಲದೆ, ಅವುಗಳ ಜಾಗೆಯನ್ನು ಆಕ್ರಮಿಸುತ್ತಿದೆ. 1990ರ ದಶಕದಲ್ಲಿ ಇದ್ದುದಕ್ಕಿಂತ ಇದರ ವ್ಯಾಪ್ತಿ ಹಾಗೂ ದಟ್ಟಣೆ ನೂರಾರು ಪಟ್ಟು ಹೆಚ್ಚಾಗಿದೆ ಎನ್ನುತ್ತಾರೆ ವಿಜ್ಞಾನಿಗಳು. ಸಮುದ್ರದ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣದಲ್ಲಿ ಏರುಪೇರಾಗಿರುವುದು ಈ ಬದಲಾವಣೆಗೆ ಕಾರಣ ಎನ್ನುತ್ತದೆ ಮೊನ್ನೆ ಸೈನ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ವರದಿ. ಈ ಚಿತ್ರ ಅದನ್ನು ಸ್ಪಷ್ಟಗೊಳಿಸುತ್ತಿದೆ.

ಚುಟುಕು ಚೂರ್ಣ


ಷಾಕ್ ನೀಡುವ ದವಡೆ !



ಐಸ್‌ಕ್ರೀಂ ತಿಂದಾಗ ಕುಳಿಬಿದ್ದ ಹಲ್ಲು ನೀಡುವ ಷಾಕ್ ಬಗ್ಗೆ ಅಲ್ಲ ಇದು. ನಿಜವಾಗಿಯೂ ನಿಮ್ಮ ದವಡೆ ಷಾಕ್ ನೀಡಬಲ್ಲುದು. ಅಮೆರಿಕೆಯ ವಿಜ್ಞಾನಿಗಳು ರೂಪಿಸುತ್ತಿರುವ ಈ ಸಾಧನವನ್ನು ಧರಿಸಿದಲ್ಲಿ ನೀವಾಡುವ ಮಾತೂ ಷಾಕ್ ನೀಡಬಲ್ಲುದು. ಅರ್ಥಾತ್, ವಿದ್ಯುತ್ ತಯಾರಾಗುವುದು. ದವಡೆಯ ಅಲ್ಪ, ಸ್ವಲ್ಪ ಚಲನೆಯನ್ನೂ ಪೀಜೋಇಲೆಕ್ಟ್ರಿಕ್ ವಿಧಾನದಿಂದ ವಿದ್ಯುತ್ತನ್ನಾಗಿ ಪರಿವರ್ತಿಸುವ ಆಲೋಚನೆಯಿಂದ ಈ ಉಪಕರಣವನ್ನು ಸಿದ್ಧಗೊಳಿಸಿದ್ದಾರಂತೆ. ಪೀಜೋಇಲೆಕ್ಟ್ರಿಕ್ ವಿಧಾನ ಎಂದರೆ ಅಡುಗೆಮನೆಯಲ್ಲಿ ಒಲೆ ಹೊತ್ತಿಸಲು ಬಳಸುವ ಲೈಟರ್‌ನಲ್ಲಿ ನಡೆಯುವಂಥದೇ ವಿದ್ಯಮಾನ. ದವಡೆ ಅಲ್ಲಾಡಿದಾಗಲೆಲ್ಲ ಇದರೊಳಗಿರುವ ವಿಶೇಷ ಹರಳೊಂದು ಕುಗ್ಗಿ, ಹಿಗ್ಗುತ್ತಾ ವಿದ್ಯುತ್ ಉತ್ಪಾದಿಸುತ್ತದೆ. ಅಂತೂ ವಾಚಾಳಿಗಳಿಗೆ ಚಿನಕುರುಳಿ ಎನ್ನುವ ಮಾತು ಅರ್ಥವತ್ತಾದದ್ದಲ್ಲವೇ? ಇನ್ನು ಮೇಲೆ ಅವರು ಮಾತಿನ ಕಿಡಿಯನ್ನಷ್ಟೆ ಅಲ್ಲ, ವಿದ್ಯುತ್ ಕಿಡಿಯನ್ನೂ ಹಾರಿಸಬಹುದು.

ಇಲೆಕ್ಟ್ರಾನಿಕ್ ಚರ್ಮ

ಚಿತ್ರ ಕೃಪೆ: ಜಾನ್ ರೋಗರ್ಸ್, ನಾರ್ತ್‌ವೆಸ್ಟರ್ನ್ ವಿವಿ



ಇದೋ ಈ ಇಲೆಕ್ಟ್ರಾನಿಕ್ ಚರ್ಮ ಸಾಧಾರಣವಾದುದಲ್ಲ. ಇದು ನಿಮ್ಮ ಹೃದಯ ಸಂಗಾತಿಯಾಗಬಲ್ಲುದು ಎನ್ನುತ್ತಾರೆ ಅಮೆರಿಕೆಯ ನಾರ್ತ್‌ವೆಸ್ಟರ್ನ್ ಹಾಗೂ ಇಲಿನಾಯ್ ಯೂನಿವರ್ಸಿಟಿಯ ವಿಜ್ಞಾನಿಗಳು. ಒಂದಿಂಚು ಅಗಲದ ಈ ತೆಳುಪರದೆಯಲ್ಲಿ 3200 ದ್ರವಹರಳುಗಳನ್ನು ಹುದುಗಿಸಿದ್ದಾರೆ. ಈ ಚರ್ಮವನ್ನು ಅಂಟಿಸಿಕೊಂಡರೆ ಅದು ಇರುವುದೇ ಗೊತ್ತಾಗುವುದಿಲ್ಲ. ಚರ್ಮ ಸುಕ್ಕಾದರೆ ಇದುವೂ ಮಡಿಚಿಕೊಳ್ಳುತ್ತದಾದರೂ ಕೆಲಸ ನಿಲ್ಲಿಸುವುದಿಲ್ಲ. ಚರ್ಮದ ತೇವಾಂಶ ಕಡಿಮೆಯಾದಾಗ ಅಥವಾ ಅದಕ್ಕೆ ಹರಿಯುತ್ತಿರುವ ರಕ್ತದಲ್ಲಿ ಏರುಪೇರಾದಾಗ ಇದು ಬಣ್ಣ ಬದಲಿಸುತ್ತದೆ. ಆ ಮೂಲಕ ಚರ್ಮದ ಹಾಗೂ ಹೃದಯದ ಆರೋಗ್ಯ ಸ್ಥಿತಿಯನ್ನು ತಿಳಿಸುತ್ತದೆಯಂತೆ. ಅದಕ್ಕಾಗಿ ವೈದ್ಯರ ಬಳಿಗೆ ಓಡಬೇಕಿಲ್ಲವಂತೆ.

ಚಾಪ್ ಸ್ಟಿಕ್ ಸುರಕ್ಷೆ



ಆಕ್ಷನ್ ಹೀರೋ ಜಾಕಿಚಾನ್ ಅನ್ನ ತಿನ್ನುವ ಚಾಪ್‌ಸ್ಟಿಕ್‌ಗಳನ್ನೇ ಹಿಡಿದು ವಿಲನ್‌ಗಳನ್ನು ಹಣ್ಣುಗಾಯಿ–ನೀರುಗಾಯಿ ಮಾಡುವುದನ್ನು ನೋಡಿದ್ದೀರಲ್ಲ. ಇದು ಅದರ ಬಗ್ಗೆಯಲ್ಲ. ಚೀನಾದ ಗೂಗಲ್ ಎಂದೆ ಹೆಸರಾದ ಬೈದು ಕಂಪೆನಿ ವಿನೂತನ ಚಾಪ್‌ಸ್ಟಿಕ್‌ಗಳನ್ನು ರೂಪಿಸಿದೆ. ಇದು ಕಲಬೆರಕೆ ಎಣ್ಣೆಯನ್ನು ಬಳಸಿರುವ ಆಹಾರ ಪದಾರ್ಥಗಳನ್ನು ಕ್ಷಣಮಾತ್ರದಲ್ಲಿ ಪತ್ತೆ ಮಾಡುತ್ತದಂತೆ. ವಿಶೇಷ ಸೆನ್ಸಾರುಗಳನ್ನು ಈ ಚಾಪ್‌ಸ್ಟಿಕ್‌ಗಳ ತುದಿಯಲ್ಲಿ ಹುದುಗಿಸಲಾಗಿದೆ. ಎಣ್ಣೆ ಹಳತಾಗಿದೆ ಎಂದು ಸುಳಿವು ಸಿಕ್ಕ ಕೂಡಲೆ ಇದು ನಿಮ್ಮ ಸ್ಮಾರ್ಟ್‌ಫೋನ್‌ಗೆ ಸಂದೇಶ ಕಳುಹಿಸುತ್ತದೆ. ಇದು ಕೆಟ್ಟದಾಗಿದೆ ಎನ್ನುತ್ತದೆ. ಮುಂದೆ ಊಟದ ಉಷ್ಣತೆ, ಆಮ್ಲೀಯತೆಯನ್ನೂ ಇದು ಪತ್ತೆ ಮಾಡಲಿದೆಯಂತೆ. ಈ ತಿಂಗಳು ಮಾರುಕಟ್ಟೆಗೆ ಪರಿಚಯವಾದ ಇದರ ಬೆಲೆ ಇನ್ನು ಮುಂದೆ ಬಯಲಾಗಬೇಕಷ್ಟೆ.

ನೀರಗಂಟಿ ಪಾಪಾಸುಕಳ್ಳಿ

ಚಿತ್ರಕೃಪೆ: ಎನ್‌ಎಸ್‌ಎಫ್



ಮರುಭೂಮಿಯಲ್ಲಿ ಬೆಳೆಯುವ ಪಾಪಾಸುಕಳ್ಳಿಗೂ, ನೀರಿಗೂ ಏನು ಸಂಬಂಧ ಎಂದು ಅಚ್ಚರಿ ಪಡಬೇಡಿ. ಕೊಳಚೆ ನೀರನ್ನು ಸ್ವಚ್ಛಗೊಳಿಸಲು ಪಾಪಾಸುಕಳ್ಳಿ ನೆರವಾಗಬಹುದು ಎನ್ನುತ್ತದೆ ಅಮೆರಿಕೆಯ ನ್ಯಾಶನಲ್ ಸೈನ್ಸ್ ಫೌಂಡೇಶನ್. ಪಾಪಾಸುಕಳ್ಳಿಯಲ್ಲಿರುವ ಲೋಳೆಯಂತ ರಸವನ್ನು ಬಗ್ಗಡ ತುಂಬಿದ ನೀರನ್ನು ತಿಳಿಗೊಳಿಸಲು ಬಳಸಲು ಯೋಜನೆ ಹಾಕಿಕೊಳ್ಳಲಾಗಿದೆ. ದಕ್ಷಿಣ ಅಮೆರಿಕೆಯ ಮೆಕ್ಸಿಕೋ ಹಾಗೂ ಕೋಸ್ಟಾರಿಕಾಗಳಲ್ಲಿ ಇವನ್ನು ಬಳಸಲು ಯೋಜಿಸಲಾಗಿದೆ. ಜ್ವಾಲಾಮುಖಿಗಳಿಂದಾಗಿ ಇಲ್ಲಿನ ಮಣ್ಣಿನಲ್ಲಿ ಅಪಾಯಕಾರಿ ಖನಿಜಾಂಶಗಳು ಹೆಚ್ಚಿದ್ದು ಅವು ಅಂತರ್ಜಲದಲ್ಲೂ ಕಾಣಿಸಿಕೊಳ್ಳುತ್ತವೆ. ಇಂತಹ ನೀರನ್ನು ಶುದ್ಧಿಗೊಳಿಸಲು ಪಾಪಾಸುಕಳ್ಳಿಯ ಲೋಳೆಯನ್ನು ಬಳಸುವುದು ಅಗ್ಗದ, ರಾಸಾಯನಿಕ ರಹಿತ ವಿಧಾನ ವಾಗಬಹುದು ಎನ್ನುವುದು ಆಶಯ.

ಪ್ರಶ್ನೋತ್ತರ ನನ್ನದು

ಜೆ.ಪಿ.ನಗರದಿಂದ ಶ್ರೀಮತಿ ವಿಜಯಲಕ್ಷ್ಮಿ ಜೇನುತುಪ್ಪವನ್ನು ಬಹಳ ದಿನಗಳು ಇಟ್ಟರೂ ಅದು ಕೆಡುವುದಿಲ್ಲವಲ್ಲ. ಯಾಕೆ?

ಎಂದು ಪ್ರಶ್ನಿಸಿದ್ದರು. ಇದಕ್ಕೆ **ಮಂಡ್ಯದಿಂದ ರಾಮಕುಮಾರ್** ಉತ್ತರ ಕಳಿಸಿದ್ದಾರೆ.

"ಜೇನುತುಪ್ಪ ವಿಶೇಷವಾಗಿ ಸಂಸ್ಕರಣೆಯಾದ ಪದಾರ್ಥ. ಹೂವಿನಿಂದ ಮಕರಂದವನ್ನು ಸಂಗ್ರಹಿಸಿದ ದುಂಬಿಗಳು ಅವನ್ನು ಗೂಡಿನಲ್ಲಿ ಉಗಿಯುತ್ತವೆ. ಈ ಮಧ್ಯೆ ಮಕರಂದದಲ್ಲಿರುವ ಸಕ್ಕರೆ ಜೀರ್ಣವಾಗಿ ಬೇರೊಂದು ರೂಪವನ್ನು ಪಡೆಯುತ್ತದೆ. ಜೊತೆಗೆ ಜೇನಿನ ಆಮ್ಲೀಯತೆಯೂ ಹೆಚ್ಚುತ್ತದೆ. ನೀರಿನ ಅಂಶ ಕಡಿಮೆಯಾಗಿ ಮಕರಂದ ಗಟ್ಟಿಯಾದ ಜೇನಿನ ರೂಪವನ್ನು ಪಡೆಯುತ್ತದೆ. ಅತ್ಯಧಿಕ ಸಕ್ಕರೆ, ಕಡಿಮೆ ನೀರಿನ ಅಂಶ, ಹೆಚ್ಚಿನ ಆಮ್ಲೀಯತೆ ಸೂಕ್ಷ್ಮಜೀವಿಗಳಿಗೆ ಮಾರಕವಾದ್ದರಿಂದ ಈ ಪದಾರ್ಥದಲ್ಲಿ ಯಾವ ಬ್ಯಾಕ್ಟೀರಿಯಾವೂ ಬೆಳೆಯಲಾರದು. ಆದ್ದರಿಂದ ಜೇನು ಬಹಳ ದಿನ ಬಾಳಿಕೆ ಬರುತ್ತದೆ. ಬರೇ ಮಕರಂದ ಇಷ್ಟು ಬಾಳಿಕೆ ಬರಲಾರದು."



ಇದಕ್ಕೆ ಪೂರಕವಾಗಿ ಮಾಹಿತಿಯನ್ನು ಕಳಿಸಿದ್ದಾರೆ ಗೋಕುಲಂನ ಶ್ರೀಮತಿ ಪ್ರೇಮ ವಿಶ್ವನಾಥ್. 'ಈಜಿಪ್ಟಿನ ಪಿರಮಿಡ್‌ಗಳಲ್ಲಿ ಸಾವಿರಾರು ವರ್ಷಗಳಷ್ಟು ಹಳೆಯ ಜೇನು ಸಿಕ್ಕಿವೆಯಂತೆ. ಇವು ಒಂದಿಷ್ಟೂ ಹಾಳಾಗಿರಲಿಲ್ಲವಂತೆ.' ಈ ಮಾಹಿತಿಯ ಜೊತೆಗೇ ಪ್ರೇಮ ವಿಶ್ವನಾಥ್ ಇನ್ನೊಂದು ಸ್ವಾರಸ್ಯಕರ ಪ್ರಶ್ನೆಯನ್ನೂ ಕೇಳಿದ್ದಾರೆ.

'ಬಳೆಯಾಕಾರದಲ್ಲಿ ಕಾಮನಬಿಲ್ಲು ಇರುವುದಿಲ್ಲವೇ?'

ನಿಮ್ಮ ಬಳಿ ಇದಕ್ಕೆ ಉತ್ತರವಿದೆಯೇ? ಅಥವಾ ಇನ್ನೂ ಸ್ವಾರಸ್ಯಕರವಾದ ಪ್ರಶ್ನೆಗಳು ಇವೆಯೋ? ಉತ್ತರವೋ, ಪ್ರಶ್ನೆಯೋ, ನಮ್ಮ ಓದುಗರ ಜೊತೆಗೆ ಹಂಚಿಕೊಳ್ಳಿ. ಉತ್ತರ/ಪ್ರಶ್ನೆಗಳನ್ನು ಕಳಿಸಬೇಕಾದ ವಿಳಾಸ: ಕನ್ನಡ ಜನಮನ, ಕಣಕ ವಿಭಾಗ, #834, ಕಾಂತಿ ಕಾಂಪ್ಲೆಕ್ಸ್, 2ನೇ ಮಹಡಿ, ನ್ಯೂ ಕಾಂತರಾಜೇ ಅರಸ್ ರಸ್ತೆ, ಕುವೆಂಪುನಗರ, ಮೈಸೂರು–570 023; ಇಮೇಲ್: super.janamana@gmail.com